ಆ) ರಾಷ್ಟ್ರೀಯ ಹೆದ್ದಾರಿಗಳಾದ ನಂ. 4 ಮತ್ತು 7 ನ್ನು ಕೂಡಿಸುವ ವರ್ತುಲ ರಸ್ತೆಯಾದ 41 ಕಿ.ಮೀ ಬಿಎಂಐಸಿ ಯೋಜನೆಯ ಭಾಗವಾಗಿದ್ದು, ಸದರಿ ಕಾಮಗಾರಿಗಳನ್ನು ನಂದಿ ಇನ್‌ಪ್ರಾಸ್ಟ್ರಕ್ಚರ್ ಎಂಟರ್‌ಪ್ರೈಸಸ್ ಲಿಮಿಟೆಡ್ ಸಂಸ್ಥೆ (ನೈಸಿಲ್)ಗೆ ನೀಡಲಾಗಿದೆ. ಸದರಿ ಕಾಮಗಾರಿಯು ಸಧ್ಯದಲ್ಲೇ ಪ್ರಾರಂಭಗೊಳ್ಳಲಿದೆ.

ಇ) ಕಂಪನಿಯು ನೀಡಬೇಕಾಗಿರುವ ಪರಿಹಾರ ಮೊತ್ತವನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಬೆಲೆ ನಿಗಧಿ ಸಮಿತಿಯು ನಿಗಧಿಪಡಿಸುವುದು.

ಈ) ಸರ್ಕಾರಿ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದ ಬಡ ರೈತರಿಗೆ ಸರ್ಕಾರದಿಂದ ನೀಡುವ ಪರಿಹಾರ ಮೊತ್ತವನ್ನು ಕಂಪನಿಯು ಪ್ರತ್ಯೇಕವಾಗಿ ಪರಿಶೀಲಿಸಿ ನಿಗಧಿಪಡಿಸಿ ನೀಡುವುದು.

ಭೂಮಾಪನ ಕಾರ್ಯ

4837 - ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿನ ಭೂಮಿಯ ಭೂಮಾಪನ ಕಾರ್ಯ ಎಷ್ಟು ವರ್ಷಗಳ ಹಿಂದೆ ಆಗಿದೆ?*
2. *ಈಗ ಎಲ್ಲ ಭೂಮಿಯ ಮಾಪನ ಮಾಡುವ ಅಗತ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*
3. *ಹಾಗಿದ್ದಲ್ಲಿ ಈ ಕಾರ್ಯವನ್ನು ಸರ್ಕಾರ ಎಂದಿನಿಂದ ಕೈಗೆತ್ತಿಕೊಳ್ಳುವುದು?*

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಈ ಕಾರ್ಯ 110 ವರ್ಷಗಳ ಹಿಂದೆ ಆಗಿದೆ.

ಆ) ಹೌದು.

ಇ) ಈ ಕಾರ್ಯಕ್ಕೆ ಹೆಚ್ಚಿನ ಹಣಕಾಸಿನ ಅವಶ್ಯಕತೆ ಇರುವುದರಿಂದ ಈ ಬಗ್ಗೆ ಪರಿಶೀಲಿಸಲಾಗುವುದು.

ರಾಜ್ಯದಲ್ಲಿರುವ ಕೈಗಾರಿಕಾ ಸಹಕಾರ ಸಂಘಗಳು

4838 - ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಇರುವ ಕೈಗಾರಿಕಾ ಸಹಕಾರ ಸಂಘಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)*

ಅ) ಅವುಗಳ ಪೈಕಿ ಲಾಭದಲ್ಲಿಷ್ಟಿದೆ ಹಾಗೂ ನಷ್ಟದಲ್ಲಿವೆ? (ಜಿಲ್ಲಾ ಮಾಹಿತಿ ಕೊಡಿ)

ಇ) ರಾಜ್ಯಮಟ್ಟದ ಕೈಗಾರಿಕಾ ಸಹಕಾರ ಸಂಸ್ಥೆ 99-2000ರಲ್ಲಿ ಮಾಡಿದ ವಹಿವಾಟು ಎಷ್ಟು ಹಾಗೂ ಲಾಭವೆಷ್ಟು?

ಈ) 31-3-2000ಕ್ಕೆ ಈ ಸಂಸ್ಥೆ ಹೊಂದಿರುವ ಹಾನಿ ಎಷ್ಟು?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 2026 ಕೈಗಾರಿಕಾ ಸಹಕಾರ ಸಂಘಗಳು ಅಸ್ತಿತ್ವದಲ್ಲಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ಲಾಭ ಮತ್ತು ನಷ್ಟದಲ್ಲಿರುವ ಕೈಗಾರಿಕಾ ಸಹಕಾರಿ ಸಂಘಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ II ರಲ್ಲಿ ನೀಡಲಾಗಿದೆ.

ಇ) ಮತ್ತು ಈ) ರಾಜ್ಯಮಟ್ಟದ ಕೈಗಾರಿಕಾ ಸಹಕಾರ ಸಂಸ್ಥೆ ಎಂಬ ಹೆಸರಿನ ಸಂಸ್ಥೆ ಇರುವುದಿಲ್ಲ. ಅದಾಗ್ಯೂ ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಮಹಾಮಂಡಳ (ನಿ) ಬೆಂಗಳೂರು ಎಂಬ ಸಂಸ್ಥೆ ಇದ್ದು ಅದು ಮಾರಾಟ ಸಂಸ್ಥೆ ಆಗಿರುವುದಿಲ್ಲ.

ಅನುಬಂಧ - 1

ರಾಜ್ಯದಲ್ಲಿರುವ ಒಟ್ಟು ಕೈಗಾರಿಕಾ ಸಹಕಾರ ಸಂಘಗಳು

ಬೆಂಗಳೂರು ವಿಭಾಗ				
1.	ಬೆಂಗಳೂರು ನಗರ ಜಿಲ್ಲೆ	-	(27+75)	102
2.	ಬೆಂಗಳೂರು ಗ್ರಾಮಾಂತರ	-		43
3.	ತುಮಕೂರು	-		65
4.	ಕೋಲಾರ	-		86
5.	ದಾವಣಗೆರೆ	-		93
6.	ಶಿವಮೊಗ್ಗ	-		53
7.	ಚಿತ್ರದುರ್ಗ	-		50
ಮೈಸೂರು ವಿಭಾಗ :				
8.	ಚಿಕ್ಕಮಗಳೂರು	-		36
9.	ಉಡುಪಿ	-		44
10.	ಹಾಸನ	-		70
11.	ಕೊಡಗು	-		13

12.	ಮಂಡ್ಯ	-	83
13.	ಮೈಸೂರು	-	81
14.	ದಕ್ಷಿಣ ಕನ್ನಡ	-	60
15.	ಚಾಮರಾಜನಗರ	-	35
ಗುಲ್ಬರ್ಗಾ ವಿಭಾಗ			
16.	ಬಳ್ಳಾರಿ	-	51
17.	ಬೀದರ್	-	62
18.	ಗುಲ್ಬರ್ಗಾ	-	96
19.	ರಾಯಚೂರು	-	40
20.	ಕೊಪ್ಪಳ	-	18
ಬೆಳಗಾವಿ ವಿಭಾಗ :			
21.	ಬೆಳಗಾವಿ	-	207
22.	ಬಿಜಾಪುರ	-	113
23.	ಬಾಗಲಕೋಟೆ	-	238
24.	ಧಾರವಾಡ	-	95
25.	ಗದಗ	-	82
26.	ಹಾವೇರಿ	-	37
27.	ಉತ್ತರ ಕನ್ನಡ	-	73

ಅನುಬಂಧ - II

ಲಾಭ - ನಷ್ಟದಲ್ಲಿರುವ ಕೈಗಾರಿಕಾ ಸಹಕಾರ ಸಂಘಗಳ ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಲಾಭದಲ್ಲಿರುವ ಸಂಘಗಳ ಸಂಖ್ಯೆ	ನಷ್ಟದಲ್ಲಿರುವ ಸಂಘಗಳ ಸಂಖ್ಯೆ
ಬೆಂಗಳೂರು ವಿಭಾಗ			
1.	ಬೆಂಗಳೂರು ನಗರ ಜಿಲ್ಲೆ	14	52
2.	ಬೆಂಗಳೂರು ಗ್ರಾಮಾಂತರ ಜಿಲ್ಲೆ	5	17
3.	ತುಮಕೂರು	6	59

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಲಾಭದಲ್ಲಿರುವ ಸಂಘಗಳ ಸಂಖ್ಯೆ	ನಷ್ಟದಲ್ಲಿರುವ ಸಂಘಗಳ ಸಂಖ್ಯೆ
4.	ಕೋಲಾರ	19	29
5.	ದಾವಣಗೆರೆ	23	70
6.	ಶಿವಮೊಗ್ಗ	5	48
7.	ಚಿತ್ರದುರ್ಗ	2	48
ಮೈಸೂರು ವಿಭಾಗ			
8.	ಚಿಕ್ಕಮಗಳೂರು	10	26
9.	ಉಡುಪಿ	9	13
10.	ಹಾಸನ	29	41
11.	ಕೊಡಗು	3	9
12.	ಮಂಡ್ಯ	10	73
13.	ಮೈಸೂರು	4	19
14.	ದಕ್ಷಿಣ ಕನ್ನಡ	10	25
15.	ಚಾಮರಾಜನಗರ	1	34
ಗುಲ್ಬರ್ಗಾ ವಿಭಾಗ			
16.	ಬಳ್ಳಾರಿ	8	19
17.	ಬೀದರ್	ಇಲ್ಲ	62
18.	ಗುಲ್ಬರ್ಗಾ	30	53
19.	ರಾಯಚೂರು	2	15
20.	ಕೊಪ್ಪಳ	11	7
ಬೆಳಗಾವಿ ವಿಭಾಗ :			
21.	ಬೆಳಗಾವಿ	52	27
22.	ಬಿಜಾಪುರ	15	30
23.	ಬಾಗಲಕೋಟೆ	76	33
24.	ಧಾರವಾಡ	6	26

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಲಾಭದಲ್ಲಿರುವ ಸಂಘಗಳ ಸಂಖ್ಯೆ	ನಷ್ಟದಲ್ಲಿರುವ ಸಂಘಗಳ ಸಂಖ್ಯೆ
25.	ಗದಗ	27	55
26.	ಹಾವೇರಿ	1	14
27.	ಉತ್ತರ ಕನ್ನಡ	34	13

ರಾಜ್ಯದಲ್ಲಿರುವ ಸಹಕಾರಿ ಎಣ್ಣೆ ಗಿರಣಿಗಳು

4839 - ಶ್ರೀ ಬಿಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಸಹಕಾರಿ ಎಣ್ಣೆ ಗಿರಣಿಗಳು ಯಾವುವು?*

ಆ) *1999-2000ರಲ್ಲಿ ಅವುಗಳು ಗಳಿಸಿದ ನಿವ್ವಳ ಲಾಭ ಅಥವಾ ನಷ್ಟವೆಷ್ಟು?*

ಇ) *31.3.2000ರ ಅಂತ್ಯಕ್ಕೆ ನಷ್ಟದಲ್ಲಿರುವ ಎಣ್ಣೆ ಗಿರಣಿಗಳ ಹಾನಿ ಎಷ್ಟು?*

ಶ್ರೀ ಡಿ. ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) 1. ಒಕ್ಕಲುತನ ಹುಟ್ಟುವಳಿ ಸಂಸ್ಕರಣ ಸಹಕಾರ ಸಂಘ ನಿ, ಸಂಕೇಶ್ವರ.

2. ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ ನಿ, ನರಗುಂದ

3. ರೈತರ ಸಹಕಾರಿ ಎಣ್ಣೆ ಗಿರಣಿ ನಿ, ಬೆಂಕದಕಟ್ಟೆ, ಗದಗ್ ಜಿಲ್ಲೆ

4. ಗದಗ ಕೋ ಆಪರೇಟಿವ್ ಆಯಿಲ್ ಮಿಲ್ಸ್ ಲಿ, ಗದಗ (ಸಮಾಪನೆಯಲ್ಲಿದೆ)

5. ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿ, ಹೊಸಪೇಟೆ.

6. ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿ, ರಾಯಚೂರು.

7. ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ, ಎಣ್ಣೆ ಸಂಕೀರ್ಣ, ದಾವಣಗೆರೆ.

ಆ)		ಲಾಭ	ನಷ್ಟ
		(ಲಕ್ಷ ರೂಪಾಯಿಗಳಲ್ಲಿ)	
1.	ಒಕ್ಕಲುತನ ಹುಟ್ಟುವಳಿ ಸಂಸ್ಕರಣ ಸಹಕಾರ ಸಂಘ ನಿ, ಸಂಕೇಶ್ವರ.	0.49	-